# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1642-2011

ಸಿಡಬ್ಲ್ಯೂ.4 ಪಿಡಬ್ಲ್ಯೂ2

| | | |
|---|---|---|
| ಸಾಕ್ಷಿಯ ಹೆಸರು | - | ಮುತ್ತೆಪ್ಪ ಚನ್ನಪ್ಪ ಭಂಗಿ |
| ವಯಸ್ಸು | - | 23 ವರ್ಷ |
| ಉದ್ಯೋಗ | - | ನೌಕರಿ |
| ವಾಸ | - | ಮಾಲದಿನ್ನಿ |

ದಿನಾಂಕಃ 14-09-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಚಾಸಾ 1 ಕೆಂಪವ್ವ ನನ್ನ ತಾಯಿ. 4 ಜನ ಆರೋಪಿತರ ಪರಿಚಯ ಇರುತ್ತದೆ.ನನ್ನ ತಂದೆ ಮಾಲದಿನ್ನಿ ಗ್ರಾಮದ ಕ್ರಾಸ್ ನಲ್ಲಿ ಆರೋಪಿತರ ಹೊಲದಲ್ಲಿ ಅವರ ಕಡೆಯಿಂದ ಒಪ್ಪಿಗೆ ಪಡೆದು ಚಹಾ ಅಂಗಡಿ ಇಟ್ಟುಕೊಂಡಿದ್ದರು, ನಮ್ಮ ವ್ಯಾಪಾರ ಚೆನ್ನಾಗಿ ನಡೆಯುತ್ತಿದ್ದನ್ನು ನೋಡಿ ಆರೋಪಿತರು ದಿಃ 15-09-2011 ರಂದು ರಾತ್ರಿ 08-00 ಗಂಟೆ ಸುಮಾರಿಗೆ 4 ಜನ ಆರೋಪಿತರು ಬಂದು, ಅಂಗಡಿಯ ಒಳಗೆ ಚಾಸಾ 1 ಇದ್ದರು, ಅವರನ್ನು 1 ನೇ ಆರೋಪಿ ತಲೆ ಕೂದಲು ಮತ್ತು ಜಂಪರನ್ನು ಹಿಡಿದು ಎಳೆದುಕೊಂಡು ಹೊರಗಡೆ ತೆಗೆದುಕೊಂಡು ಬಂದ. ಆರೋಪಿತರು ಹಡಸು, ಹಾದರಗಿತ್ತಿ ನಮ್ಮ ಜಾಗಾದಲ್ಲಿ ಅಂಗಡಿ ಏಕೆ ಇಟ್ಟಿದ್ದಿ ಅಂತಗ ಬೈದರು, 2 ನೇ ಆರೋಪಿ ಕೈಯಿಂದ ಗುದ್ದಿದ, 4 ನೇ ಆರೋಪಿ ಅಂಗಡಿಯ ಗ್ಲಾಸನ್ನು ಒಡೆದನು. ಎಲ್ಲರೂ ಕೈಯಿಂದ ಬಡಿದರು. ಆಗ ನಾನು ಹೊರಗಡೆ ಇದ್ದೆ ನನ್ನ ತಾಯಿ ಚಿರಾಡುವುದನ್ನು ಕೇಳಿ ಬಂದು ಜಗಳವನ್ನು ನೋಡಿದೇನು. ನಾನು ಮತ್ತು ಚಾಸಾ 5 ಮತ್ತು 6 ಹಾಗೂ ಅಂಗಡಿಯಲ್ಲಿದ್ದ ಗ್ರಾಹಕರು ಸೇರಿ ಜಗಳವನ್ನು ಬಿಡಿಸಿದೇವು. ಘಟನೆ ನಡೆದಾಗ ಅಂಗಡಿಯಲ್ಲಿ ಲೈಟ್ ಬೆಳಕು ಇತ್ತು. ಸದರಿ ಬೆಳಕಿನಲ್ಲಿ ಆರೋಪಿತರನ್ನು ನೋಡಿದ್ದೇನೆ. ಆರೋಪಿತರು ಹೋಗುವಾಗ ನಮ್ಮ ಹೊಲದಲ್ಲಿನ ಅಂಗಡಿಯನ್ನು ತೆಗೆದರೆ ಸರಿ, ಇಲ್ಲದಿದ್ದರೆ ನಿಮ್ಮನ್ನು ಜೀವಂತ ಬಿಡುವುದಿಲ್ಲ ಅಂತಾ ಅನ್ನುತ್ತಾ ಹೋದರು. ನನ್ನ ತಾಯಿಗೆ ಹಣೆಗೆ, ಕೈಗೆ ಪೆಟ್ಟಾಗಿತ್ತು. ಹೋಟೆಲ್ ನ ಗ್ಲಾಸನ್ನು ಗುದ್ದಿದ್ದ ಕಾರಣ ಒಡೆದಿತ್ತು. ನಂತರ ನಾನು ಮತ್ತು ನನ್ನ ತಾಯಿ ಚಾಸಾ 1 ಸೇರಿ ಠಾಣೆಗೆ ಹೋದೆವು ಅಲ್ಲಿ ನಿಪಿ-1 ನ್ನು ನಾನು ನನ್ನ ತಾಯಿ ಚಾಸಾ 1 ಹೇಳಿದಂತೆ ಬರೆದೇನು. ನಿಪಿ-1 ರ ಮೇಲಿಂ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಆ ದಿನ ಚಾಸಾ 1 ರಿಗೆ ಹೊಡಿ ಬಡಿ ಮಾಡಿದ ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿಯು ಆಸ್ರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ ಎಸ್ ಎಸ್ ಎಂಃ ಆರೋಪಿ ಪರ ವಕೀಲರಿಂದಃ

ಆರೋಪಿತರ ಹೊಲದಲ್ಲಿ ನಾವು ಚಹಾ ಅಂಗಡಿಯನ್ನು ಇಡಲು ಮಾಡಿಕೊಂಡ ಒಪ್ಪಂದಕ್ಕೆ

ಯಾವುದೇ ಲಿಖಿತ ದಾಖಲೆಯನ್ನು ಮಾಡಿಕೊಂಡಿರಲಿಲ್ಲ. ಅಂಗಡಿ ನಡೆಸಲು ಪರವಾಣಿಗೆಯನ್ನು ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಗ್ರಾಹಕರು ಒಳಗಡೆ ಕೂಡಲು ವ್ಯವಸ್ಥೆ ಇಲ್ಲ. ಹೊರಗಡೆ 2-3 ಜನ ಕೂಡಲು ಪ್ಲಾಸ್ಟಿಕ್ ಚೇರ್ ಗಳನ್ನು ಇಟ್ಟಿರುತ್ತೇವೆ. ಲೋಕೋಪಯೋಗಿ ಇಲಾಖೆಯವರು ನಮ್ಮ ಅಂಗಡಿಯನ್ನು ತೆಗೆಯಲು ನೋಟಿಸು ನೀಡಿದ್ದರು ಎಂದರೆ ಸರಿ. ಘಟನೆಯ ಮುಂಚೆ ಈ ನೋಟಿಸನ್ನು ನೀಡಿದ್ದರು ಎಂದರೆ ಸರಿ ಅಲ್ಲ. ಘಟನೆಯ ಮುಂಚೆ ಆರೋಪಿತರು ಪಂಚಾಯಿತಿಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಅರ್ಜಿ ನೀಡಿದ್ದರು ಎಂದರೆ ಸರಿ ಅಲ್ಲ. ಸಾಕ್ಷಿಯು ಘಟನೆಯ ನಂತರ ನೀಡಿರುತ್ತಾರೆ ಎಂದು ಹೇಳುತ್ತಾರೆ. ಚಾಸಾ 1 ರವರು ಈ ಅಂಗಡಿ ಕುರಿತು ಸಿವಿಲ್ ದಾವೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಅಂಗಡಿ ವಿದ್ಯುತ್ ಸಂಪರ್ಕದ ಅನುಮತಿ ಕುರಿತು ನನಗೆ ಮಾಹಿತಿ ಇಲ್ಲ. ಮಾಲದಿನ್ನಿ ಕ್ರಾಸ್ ದಲ್ಲಿ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಘಟನೆ ನಡೆದಾಗ ನಮ್ಮ ಅಂಗಡಿಯ ಮುಂದೆ 4-5 ಜನ ಗ್ರಾಹಕರು ಇದ್ದರು. ನಮ್ಮ ಅಂಗಡಿಯು ಸಾಮಾನ್ಯವಾಗಿ 09-00 ಗಂಟೆಯವರೆಗೆ ಇರುತ್ತದೆ. ಆರೋಪಿತರಿಗೂ ಮತ್ತು ನಮಗೂ ಅಂಗಡಿ ವಿಷಯವಾಗಿ ಮನಸಾ ಮನಸು ಸರಿ ಇಲ್ಲ ಎಂದರೆ ಸರಿ ಅಲ್ಲ. ಘಟನೆಯು ನಡೆದಾಗ ಅಂಗಡಿಯ ಹೊರಗೆ ಅಲ್ಲೇ 10 ಮೀಟರ ದೂರ ಇದ್ದೆ. ನಾನು ದೂರ ಇದ್ದ ಕಾರಣ ನನಗೆ ಏನೂ ಕಾಣಿಸಿಲ್ಲ ಎಂದರೆ ಸರಿ ಅಲ್ಲ. ಒಂದು ಗಂಟೆಯವರೆಗೆ ಜಗಳವಾಯಿತು, ನಂತರ ಠಾಣೆಗೆ 09-00 ಗಂಟೆಯಿಂದ 09-30 ಗಂಟೆಯ ಅವಧಿಯಲ್ಲಿ ಬಂದೇವು. ಘಟನೆಯ ಸಮಯದಲ್ಲಿ ಜನ ಸೇರಲಿಲ್ಲ. ಅಂಗಡಿಯ ಗ್ಲಾಸ ಒಡೆದು ಅಲ್ಲೆ ಬಿದ್ದಿತ್ತು, ಈ ಬಗ್ಗೆ ಪೊಲೀಸರಿಗೆ ಹೇಳಿದ್ದೇನು. ಆರೋಪಿತರು ಬೈದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿದ್ದೇನು. ಘಟನಾ ಸ್ಥಳದಿಂದ ಗೋಕಾಕ ಪೊಲೀಸ್ ಠಾಣೆ 10 ನಿಮೀಷದ ದಾರಿ ಎಂದರೆ ಸಾಕ್ಷಿಯು ನಾನು ಬೇರೆಯವರ ಬೈಕ್ ಇಸಿದುಕೊಂಡು ಬರಲು ತಡವಾಯಿತು ಎಂದು ಹೇಳುತ್ತಾರೆ.

ಆರೋಪಿತರು ಚಾಸಾ 1 ರಿಗೆ ಯಾವತ್ತು ತಲೆ ಕೂದಲು ಮತ್ತು ಜಂಪರ ಹಿಡಿದು ಎಳೆದಾಡಿಲ್ಲ, ಹೊಡಿ ಬಡಿ ಮಾಡಿಲ್ಲಾ, ಅವಾಚ್ಯವಾಗಿ ಬೈದಿಲ್ಲಾ ಮತ್ತು ಜೀವದ ಧಮಕಿ ಹಾಕಿಲ್ಲಾ ಹಾಗೂ ಅಂಗಡಿಯ ಗ್ಲಾಸ ಒಡೆದಿಲ್ಲಾ ಎಂದರೆ ಸರಿ ಅಲ್ಲ. ನಾನು ಮತ್ತು ಚಾಸಾ 5, 6 ಸೇರಿ ಜಗಳವನ್ನು ಬಿಡಿಸಿಲ್ಲಾ ಎಂದರೆ ಸರಿ ಅಲ್ಲ. ಆರೋಪಿತರನ್ನು ಲೈಟ್ ಬೆಳಕಿನಲ್ಲಿ ನೋಡಿಲ್ಲಾ ಎಂದರೆ ಸರಿ ಅಲ್ಲ. ಆರೋಪಿತರು ನಮ್ಮ ಅಂಗಡಿಯನ್ನು ಖಾಲಿ ಮಾಡಿಸಬಾರದು ಅಂತಾ ಆರೋಪಿತರ ಮೇಲೆ ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.